(ಆ) ದಿನಾಂಕ ೨೫-೧೧-೧೯೮೦ ರಿಂದ ಜಾರಿಗೆ ಬರುವಂತೆ ಭೂ ಸುಧಾರಣೆಯ ಕಾಯ್ದೆಯ ಕಲಂ ೫೫ಕ್ಕೆ ತಿದ್ದುಪಡಿ ಮಾಡಿರುವ ರೀತ್ಯ ಗೇಣಿದಾರರಿಗೆ ಮೊದಲ ಕಂತಿನ ಪ್ರಿಮಿಯಂ ಕೊಡಬೇಕು ಎಂಬ ನಿರ್ಧಾರವಿಲ್ಲದೆ, ಅಧಿಭೋಗದಾರಿಕೆ ಹಕ್ಕು ಪತ್ರವನ್ನು ನೀಡಲಾಗುತ್ತಿದೆ.

(ಆ) ಪ್ರಿಮಿಯಂ ಮೊತ್ತವನ್ನು ನಿರ್ಧರಿಸುವುದು ಮತ್ತು ಅಧಿಭೋಗದಾರಿಕೆ ಪತ್ರವನ್ನು ನೀಡುವುದು ವಿಭಿನ್ನ ಕಾರ್ಯಗಳಾಗಿರುತ್ತವೆ ಮತ್ತು ಪ್ರಿಮಿಯಂ ಅನ್ನು ಕಾನೂನು ಬದ್ಧವಾಗಿ ವಸೂಲು ಮಾಡಲಾಗುತ್ತಿದೆ.

(ಇ) ಇಲ್ಲ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆ ರಸ್ತೆ ರಚಿಸುವ ಕುರಿತು ಅಧ್ಯಯನ ವರದಿ

೪೦೭ (೩೭೫) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ),—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

(ಅ) ಬೆಂಗಳೂರು–ಮೈಸೂರು ಮಧ್ಯೆ ''ಎಕ್ಸ್‌ಪ್ರೆಸ್ ಹೈವೆ'' ರಸ್ತೆ ರಚಿಸುವ ಕುರಿತು ಅಧ್ಯಯನದ ವರದಿಯ ಮೇಲೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

(ಆ) ಈ ಮಾರ್ಗ ರಚನೆಗಾಗಿ ಬೇಕಾಗುವ ಅಂದಾಜು ವೆಚ್ಚವೆಷ್ಟು ?

(ಇ) ಈ ರಸ್ತೆ ನಿರ್ಮಾಣವನ್ನು ಕಾರ್ಯಗತಗೊಳಿಸಲು ಹಾಗೂ ಸಂಪನ್ಮೂಲ ಕ್ರೋಢೀಕರಣವನ್ನು ಖಾಸಗಿ ವಿದೇಶಿ ಸಂಸ್ಥೆಗೆ ನೀಡಲಾಗಿದೆಯೇ ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಸಚಿವರು).—

(ಅ) ಬೆಂಗಳೂರು–ಮೈಸೂರು ''ಎಕ್ಸ್‌ಪ್ರೆಸ್ ವೇ'' ರಚಿಸುವ ಬಗ್ಗೆ ಅಧ್ಯಯನ ವರದಿಯನ್ನು ಆಧರಿಸಿ, ಸದರಿ ನಗರಗಳ ಮಧ್ಯೆ ನಾಲ್ಕು ಲೇನಿನ ''ಎಕ್ಸ್‌ಪ್ರೆಸ್ ವೇ'' ಯನ್ನು ನಿರ್ಮಿಸಲು ''ಟರ್ನ್ ಕೀ'' ಆಧಾರದ ಮೇಲೆ ಗುತ್ತಿಗೆಗಳನ್ನು ಸ್ವೀಕರಿಸಲು ದಿನಾಂಕ ೩-೧೦-೧೯೮೮ ರಂದು ಒಂದು ಅಧಿಸೂಚನೆಯನ್ನು ಹೊರಡಿಸಿದೆ. ಗುತ್ತಿಗೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ೧೫-೫-೧೯೮೯ ರವರೆಗೆ ವಿಸ್ತರಿಸಲಾಗಿದೆ.

(ಆ) ಅಂದಾಜು ವೆಚ್ಚ : ೧೬೦.೮೪ ಕೋಟಿ ರೂಪಾಯಿಗಳು.

(ಇ) ಇಲ್ಲ.

ರಾಜ್ಯದಲ್ಲಿರುವ ನ್ಯಾಯ ಬೆಲೆ ಅಂಗಡಿಗಳು

೪೦೮ (೪೯೧) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

(ಅ) ರಾಜ್ಯದಲ್ಲಿರುವ ನ್ಯಾಯಬೆಲೆ ಅಂಗಡಿಗಳೆಷ್ಟು ? (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಬಾಬ್ತು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಂದ ನಡೆಸಲ್ಪಡುತ್ತಿರುವ ಅಂಗಡಿಗಳೆಷ್ಟು ?

(ಇ) ಪರವಾನಗಿ ರದ್ದುಪಡಿಸಲಾಗಿರುವ ನ್ಯಾಯಬೆಲೆ ಅಂಗಡಿಗಳೆಷ್ಟು ? ಯಾವ ಯಾವ ಕಾರಣಗಳಿಂದಾಗಿ ಪರವಾನಗಿ ರದ್ದುಪಡಿಸಲಾಗಿದೆ ? ಹಾಗೂ ಈ ರೀತಿ ರದ್ದುಪಡಿಸಲಾದ ನ್ಯಾಯಬೆಲೆ ಅಂಗಡಿಗಳೆಷ್ಟು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

(ಅ) ರಾಜ್ಯದಲ್ಲಿ ೧೬,೫೭೪ ನ್ಯಾಯಬೆಲೆ ಅಂಗಡಿಗಳು ಇರುತ್ತವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ.